PAPERS LAID ON THE TABLE

Re. Information about Harangi Project.

SRI H. M CHANNABASAPPA. - Madam Speaker on 30th April 1974 I had promised to lay on the Table certain information required by the hon the leader of the opposition Sri H. D. Deve Gowda about Harangi project, in pursuance of that promise on 30th April 1974 I am laying it on the Table of the House. *

CONSTITUTION OF 59 DEPARTMENTAL RECRUITMENTS COMMITTEES

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈ ಇಲಾಖೆಗಳ ನೇಮಕಾತಿಗಳ ಬಗ್ಗೆ ರಚಿಸಿರುವ ಸಮಿತಿಗಳ ಸದಸ್ಯರನ್ನು ಬದಲಾವಣೆ ಮಾಡಬೇಕು ಎಂದು ಹೇಳಿದಾಗ ಇನ್ನು ೩-೪ ದಿವಸದಲ್ಲಿ ತಮಗೆ ಬಗ್ಗೆ ಹೇಳುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಇದುವರೆಗೂ ಆ ಬಗೆ ಏನೂ ಹೇಳಲಿಲ್ಲ. ಈಗಾಗಲೇ ಇಂಟರ್‌ವ್ಯೂಗೆ ಕರೆಯುತ್ತಿದ್ದಾರೆ. ನಾವು ಈ ಪ್ರಶ್ನೆಯನ್ನು ಎತ್ತಿದ್ದಾಗ ಮುಖ್ಯಮಂತ್ರಿಗಳು ಏನೆಂದು ತೀರ್ಮಾನಕ್ಕೆ ಒಪ್ಪಿಕೊಂಡಿದ್ದಿರೋ ಅದರಂತೆ ಅವರು ನಡೆಯುವುದು ಸರಿ ಅಲ್ಲವೇ ಸ್ವಾಮಿ ?

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ೩ ದಿವಸದಲ್ಲಿ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದರು. ೧೫ ದಿವಸವಾಯಿತು. ಇನ್ನೂ ಹೇಳಿಕೆ ಕೊಟ್ಟಿಲ್ಲ. ಆದುದರಿಂದ ಇನ್ನು ೩ ದಿವಸದ ಒಳಗಾದರೂ ಒಂದು ಹೇಳಿಕೆ ಮಾಡಿಸಿ ಸ್ವಾಮಿ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆ ದಿವಸ ನಾನೂ ಇದ್ದೆ. ಕೆಲವು ವಿಷಯದಲ್ಲಿ ಸಮಾಲೋಚನೆ ಮಾಡಬೇಕು ಎಂದು ಹೇಳಿದ್ದು ನನಗೆ ಜ್ಞಾಪಕ ಇದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮುಖ್ಯಮಂತ್ರಿಗಳು ರೆಕ್ಟಿಫೈ ಮಾಡಿ ಮಾಡಿಫೈ ಮಾಡುತ್ತೇವೆ ಎಂದೂ ಹೇಳಿದ್ದಾರೆ.

ಅಧ್ಯಕ್ಷರು.—ಅವರು ಡಿಮ್ಯಾಂಡ್‌ಗೆ ಉತ್ತರ ಕೊಡುವ ದಿವಸ ಹೇಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಆ ಸಮಿತಿಗಳವರು ಈಗಾಗಲೆ ನೂರಾರು ಜನರನ್ನು ಇಂಟರ್‌ವ್ಯೂ ಮಾಡುತ್ತಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅವರು ತಮ್ಮ ಸಲಹೆಗಳ ಬಗ್ಗೆ ಸಮಾಲೋಚಿಸಿ ಮತ್ತೆ ಏನು ಮಾಡಬೇಕು ಎನ್ನುವಷ್ಟಕ್ಕಂಥ ವಿಷಯದಲ್ಲಿ ತಮಗೆ ಹೇಳಿಕೆ ಕೊಡುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆ ಡಿಪಾರ್ಟ್‌ಮೆಂಟ್‌ಗೊಂದಿಗೆ ಸಮಾಲೋಚನೆ ಮಾಡಿ ಅವರ ಸಲಹೆ ಏನು ಇದೆ ಎನ್ನುವುದನ್ನು ತಿಳಿಸಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರು ಹೇಳಿದಂತೆ ಆದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಆದರಲ್ಲಿ ಏನೂ ಆತ್ಮ ಇಲ್ಲ ಈಗೊತ್ತು ಅವರು ಊರಲ್ಲಿ ಇಲ್ಲ. ನಾಳೆ ಅವರು ಬರುತ್ತಾರೆ. ಬಂದ ಮೇಲೆ ಇದರ ಬಗ್ಗೆ ಏನು ಮಾಡಬೇಕು ಎಂಬುದನ್ನು ಹೇಳುತ್ತಾರೆ.

---

*Copy placed in Karnataka Legislative Library *vide* No. 41/Q 30th April 1974.

ಶ್ರೀ ಕಾಗೋಡು ತಿಮ್ಮಪ್ಪ.—ಅನೇಕ ಸಾರಿ ನಾವು ಮುಖ್ಯಮಂತ್ರಿಗಳಿಗೆ ಈ ಸದನದ ಕಾರ್ಯ ಕಲಾಪಗಳ ಬಗ್ಗೆ ಪ್ರಯಾರಿಟಿ ಕೊಡಬೇಕೆಂದು ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದೇವೆ. ಆದರೂ ಕೂಡ ಅವರು ಈ ರೀತಿ ಉದಾಸೀನ ಮಾಡುವುದು ಸಾಧುವಾದದಲ್ಲ ಮತ್ತೊಮ್ಮೆ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅವರ ಘನತೆ ಉಳಿದುಕೊಳ್ಳಲು ಅವರು ಏನು ಮಾಡಬೇಕು ಎಂಬುದನ್ನು ಅವರೇ ನಿರ್ಧಾರ ಮಾಡಲಿ.

ಅಧ್ಯಕ್ಷರು — ಈಗಾಗಲೇ ವೇಳೆ ಬಹಳ ಆಯಿತು. ಈ ವಿಚಾರ ಇನ್ನು ಸಾಕು. ಮುಂದಿನ ಕಾರ್ಯ ಕಲಾಪಗಳಿಗೆ ಹೋಗೋಣ. ಈವೊತ್ತಿನ ಡಿಮ್ಯಾಂಡ್‌ಗೆ ಇಬ್ಬರು ಮಂತ್ರಿಗಳು ಉತ್ತರ ಕೊಡಬೇಕು. ಅವರಿಗೆ ೧–೩೦ ಗಂಟೆ ವೇಳೆ ಬೇಕಾಗುತ್ತದೆ. ಈಗಾಗಲೇ ವೇಳೆ ೨–೩೦ ಗಂಟೆ ಆಗಿದೆ. ಆದುದರಿಂದ ಇರತಕ್ಕಂಥ ವೇಳೆಯಿನ್ನು ಹೊಂದಿಸಿಕೊಂಡು ಎಲ್ಲರೂ ಮಾತನಾಡಬೇಕು. ಈ ದಿವಸ ಮಾತನಾಡುವವರು ಇನ್ನೂ ೧೬ ಜನ ಇದ್ದಾರೆ. ಈವೊತ್ತಿನ ಕಾರ್ಯಕಲಾಪಗಳನ್ನು ಬೇಗ ಮುಗಿಸುವಂತೆ ಪ್ರಾಣ್ಯ ಸದಸ್ಯರೇ ವೇಳೆಯನ್ನು ಹೊಂದಿಸಿಕೊಂಡು ಮಾತನಾಡಬೇಕೆಂದು ತಿಳಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈವೊತ್ತಿನ ಕಾರ್ಯಕಲಾಪಗಳನ್ನು ಈವೊತ್ತೇ ಸ್ವಲ್ಪ ಹೆಚ್ಚು ಹೊತ್ತು ಕೂತುಕೊಂಡು ಮುಗಿಸೋಣ.

ಅಧ್ಯಕ್ಷರು.—ನಮಗೆ ಬೇರೆ ಬೇರೆ ಮುಂಚೆಯೇ ನಿರ್ಧರಿಸಿದ ಕಾರ್ಯಗಳು ಇರುತ್ತವೆ ' ಹಾಗೆ ಹೆಚ್ಚು ಹೊತ್ತು ಕೂತುಕೊಳ್ಳುವುದಕ್ಕಾಗುವುದಿಲ್ಲ. ಇರತಕ್ಕ ವೇಳೆಯನ್ನು ಹೊಂದಿಸಿಕೊಂಡು ಮುಗಿಸಬೇಕು.

ಶ್ರೀ ಹೆಚ್. ಡಿ ದೇವೇಗೌಡ.— ನಾವು ಈ ಸದನದ ವೇಳೆಯನ್ನು ಕಳೆಯಬೇಕು ಅಂತ ಅನಾವಶ್ಯಕವಾಗಿ ಮಾತನಾಡುತ್ತಿಲ್ಲ. ಕೆಲವು ವಿಷಯಗಳನ್ನು ಇಂಥಾ ಸಮಯದಲ್ಲಿ ಮಾತನಾಡ ಬೇಕಾದಂಥ ಸನ್ನಿವೇಶಗಳು ಬರುತ್ತವೆ. ನಮಗೂ ಕೂಡ ಈ ಸಭೆಯ ಕಾರ್ಯಕಲಾಪಗಳಿಗೆ ಮಹತ್ವ ಕೊಡಬೇಕು ಎನ್ನುವುದು ಗೊತ್ತಿದೆ. ಅದು ನಮ್ಮ ಧರ್ಮ. ಈವೊತ್ತು ಇಂಡಸ್ಟ್ರೀಸ್ ಡಿಮ್ಯಾಂಡ್ ಇದೆ. ಅದು ಬಹಳ ಮುಖ್ಯವಾದಂಥ ವಿಷಯವಾದುದುದಂದ ಅದರ ಬಗ್ಗೆ ಹೆಚ್ಚು ಮಾತನಾಡಬೇಕಾಗಿರುತ್ತೆ. ಜೀರೋ ಅವರ್ ಬೇಡ ಅನ್ನುವುದಾದರೆ ಬಿಟ್ಟುಬಿಡೋಣ.

ಅಧ್ಯಕ್ಷರು.—ಇನ್ನು ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

BUDJET ESTIMATES FOR 1974-75

DEMANDS FOR GRANTS

DEMAND NOS. 1, 17, 50, 51 AND 52

Debate Continued

ಶ್ರೀ ಹೆಚ್. ಡಿ ದೇವೇಗೌಡ.—(ಹೊಳೆನರಸೀಪುರ) ಮಾನ್ಯ ಸಭಾಧ್ಯಕ್ಷರೆಯವರೇ ಈ ಕೈಗಾರಿಕಾ ಇಲಾಖಾ ಬೇಡಿಕೆಗಳ ಬಗ್ಗೆ ಮತ್ತು ಲೆಜಿಸ್ಲೇಚರ್ ಬಗ್ಗೆ ಇಟ್ಟಿರತಕ್ಕಂಥ ಬೇಡಿಕೆಗಳ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಪ್ರಾಸ್ತಾಪವಾಗಿ ಲೆಜಿಸ್ಲೇಚರ್ ಬಗ್ಗೆ ನಾನು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ನಾನು ಈ ಶಾಸನಸಭೆಗೆ ಎಂದು ಸದಸ್ಯನಾಗಿ ಬಂದೆನೋ ಆವಾಗಲೇ ಶ್ರೀಮಾನ್ ಎಸ್.ಎಂ ಕೃಷ್ಣ ಅವರೂ ಕೂಡ ಬಂದರು. ಒಟ್ಟಿಗೆ ಪ್ರವೇಶಿಸಿ ಬಂದೆವು. ಈವೊತ್ತಿನ ದಿವಸ ಅವರು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳಾಗಿ ಆ ಕಡೆ ಕುಳಿತಿದ್ದಾರೆ. ಆವರು ಇತ್ತಕಡೆ ಕುಳಿತುಕೊಂಡಿದ್ದಾಗ ಏನು ವಾದ ಮಾಡುತ್ತಿದ್ದರು ಎಂಬುದನ್ನು ಅವರ ಜ್ಞಾಪಕಕ್ಕೆ ತಂದುಕೊಡುತ್ತೇನೆ. ಏತಕ್ಕೆಂದರೆ ಲೆಜಿಸ್ಲೇಚರ್‌ಗೆ ಒಂದು ಸ್ವತಂತ್ರವಾದ ಶಕ್ತಿ ಇರಬೇಕು ಎನ್ನುವ ವಾದವನ್ನು ಬೆಳಗಾಂನ ಹಿರಿಯ ಸದಸ್ಯರಾದಂಥ ವಿ. ಎಸ್. ಪಾಟೀಲ್ ಅವರು ಪದೇ ಪದೇ ಹೇಳುತ್ತಿದ್ದರು. ಆದನ್ನು ಶ್ರೀ ಎಸ್. ಎಂ. ಕೃಷ್ಣ ಅವರು ಸಮರ್ಥನೆ ಮಾಡುತ್ತಿದ್ದರು. ಈಗ ಅವರು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳಾಗಿರುವುದರಿಂದ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.